
ಫ್ರೀಡರಿಕ್ ಫೋಕುಲ್ ಚಿತ್ರ: ಎಸ್.ಕೆ.ದಿನೇಶ್

# ಜರ್ಮನ್ ಭಾಷೆ ಕಲಿಸುವಾಸೆ..

ಪರಿಸರ ಸಂರಕ್ಷಣೆಗೆ ಆದ್ಯತೆ, ಭಾಷೆ ಕಲಿಸುವ ಪ್ರೀತಿ, ಸೈಕ್ಲಿಂಗ್ ವ್ಯಾಮೋಹ, ದೇಸಿ ಉಡುಗೆ ಬಗ್ಗೆ ಮಮತೆ... ಇವಿಷ್ಟು ಜರ್ಮನಿಯಿಂದ ಬಂದ ಫ್ರೀಡರಿಕ್ ಫೋಕುಲ್ ಅವರ ಆಸ್ಥೆಯ ಕ್ಷೇತ್ರಗಳು.

ಹೌದು, ಫ್ರೀಡರಿಕ್ ಫೋಕುಲ್ ಜರ್ಮನಿಯಿಂದ ಬಂದವರು. ಇವರು ಎಲ್ಲೇ ಪ್ರವಾಸ ಹೋಗಲಿ, ಯಾವ ದೇಶಕ್ಕೇ ಹೋದರೂ ಮರಳಿ ಬೆಂಗಳೂರಿಗೆ ಬಂದು ಸೇರುತ್ತಾರೆ. ಬೆಂಗಳೂರು ಫೋಕುಲ್ ಅವರ 'ಸೆಕೆಂಡ್ ಹೋಮ್' ಅಂತೆ. ಫ್ರೀಡರಿಕ್ ತಮ್ಮ ಹದಿನೆಂಟನೇ ವಯಸ್ಸಿಗೇ ಬೆಂಗಳೂರಿಗೆ ಬಂದವರು. ಸ್ವಯಂಸೇವಕಿಯಾಗಿ ಮೊದಲು ಕೇರಳದ ಹಳ್ಳಿಯೊಂದಕ್ಕೆ ಬಂದ ಇವರು ಹಳ್ಳಿ ಜನರಿಗೆ ಅರಿವು ಮೂಡಿಸುವ ಕೆಲಸ ಮಾಡಿದ್ದರಂತೆ. ಅಲ್ಲಿರುವಾಗಲೇ ಗೋವಾ, ಹಂಪಿ, ಕೋಲ್ಕತ್ತಾ, ಡಾರ್ಜಿಲಿಂಗ್, ವಾರಣಾಸಿ ಮತ್ತು ರಾಜಸ್ತಾನ ಪ್ರವಾಸ ಮಾಡಿ ಬಂದಿದ್ದಾರೆ.

2010ರಲ್ಲಿ ಬೆಂಗಳೂರಿನ ಎನ್‌ಜಿಒ ಒಂದರಲ್ಲಿ ಕೆಲಸ ಮಾಡಿದರು. ಮತ್ತೆ ಕೆಲಕಾಲ ವಾಪಸ್ ಜರ್ಮನಿಗೇ ಹೋದ ಫ್ರೀಡರಿಕ್ 2013ರಲ್ಲಿ ಬೆಂಗಳೂರಿಗೆ ವಾಪಸಾದರು.

ಜೀನ್ಸ್–ಟಿ ಶರ್ಟ್ ಮೆಚ್ಚಿನ ಉಡುಗೆ ಎನ್ನುವ ಫ್ರೀಡರಿಕ್ ಸಲ್ವಾರ್ ಅನ್ನೂ ಬಹಳ ಇಷ್ಟಪಡುತ್ತಾರಂತೆ. ಹಣೆಗೆ ಬಿಂದಿ ಹಾಕಿಕೊಳ್ಳುವುದು ಇವರ ದೇಶದ ಪದ್ಧತಿ ಅಲ್ಲದಿದ್ದರೂ ಇಲ್ಲಿ ಅವರಿಗೆ ಸಲ್ವಾರ್ ಹಾಕಿದಾಗ ಬಿಂದಿ ಹಾಕಿಕೊಳ್ಳುವ ಆಸೆ ಅಂತೆ.

ಇಲ್ಲಿನ ಸಂಸ್ಕೃತಿ ಸಂಪ್ರದಾಯಗಳ ಬಗ್ಗೆ ಫ್ರೀಡರಿಕ್ ಅವರಿಗೆ ಕುತೂಹಲ, ಅಚ್ಚರಿ, ಕಾಳಜಿ ಎಲ್ಲವೂ ಇದೆ. ಇಲ್ಲಿಗೆ ಬಂದ ಮೊದಮೊದಲು ಬೆಂಗಳೂರಿಗರ ಸಂಸ್ಕೃತಿ, ಕಟ್ಟುಪಾಡುಗಳು ಇವರಿಗೆ ಬಹಳ ಕುತೂಹಲ ಕೆರಳಿಸಿದವು. ಇಲ್ಲಿನ ಜೀವನಶೈಲಿ ವಿಭಿನ್ನವಾದದ್ದು. ಕೂಡು ಕುಟುಂಬ ವ್ಯವಸ್ಥೆ ಜತೆಗೆ ಕುಟುಂಬದೊಳಗಿನ ಸೌಹಾರ್ದ, ಸ್ನೇಹಮಯ ವಾತಾವರಣ ಕಂಡು ಬಹಳ ಖುಷಿ ಪಟ್ಟರು. 'ತಮ್ಮ ದೇಶದಲ್ಲಿ ಇಂತಹ ಸಂಸ್ಕಾರ ಇಲ್ಲವೇ ಇಲ್ಲ' ಎನ್ನುವ ಫ್ರೀಡರಿಕ್ ಈಗ ಇಲ್ಲಿನ ಜೀವನಶೈಲಿಗೆ ಸಂಪೂರ್ಣವಾಗಿ ಹೊಂದಿಕೊಂಡಿದ್ದಾರೆ.

ಫ್ರೀಡರಿಕ್ ಸದ್ಯ ಬೆಂಗಳೂರಿನ ಸಂಸ್ಥೆಯೊಂದರಲ್ಲಿ ಜರ್ಮನ್ ಭಾಷೆ ಕಲಿಸುವ ಶಿಕ್ಷಕಿ. 'ಇಲ್ಲಿ ಜರ್ಮನ್ ಭಾಷೆ ಕಲಿಯುವ ಜನರ ಆಸಕ್ತಿ ಮತ್ತು ಬೇಡಿಕೆ ನೋಡಿ ಇದನ್ನು ಕಲಿಸುವ ಯೋಚನೆ ಮಾಡಿದೆ. ಬಹಳಷ್ಟು ವಿದ್ಯಾರ್ಥಿಗಳು ಜರ್ಮನ್ ಭಾಷೆ ಕಲಿಯುವ ಆಸಕ್ತಿ ತೋರುತ್ತಿದ್ದಾರೆ. ಇಲ್ಲಿಗೆ ಬಂದ ಮೇಲೆ ಸಮಾಜ ಸೇವೆಯ ಜತೆಗೆ ಭಾಷಾ ಕಲಿಕೆಯತ್ತಲೂ ನನ್ನ ಆಸಕ್ತಿ ವಿಸ್ತರಿಸಿದೆ' ಎಂದು ಹೇಳುತ್ತಾರೆ ಈ ಯುವತಿ.

ಪರಿಸರದ ಬಗ್ಗೆ ಫ್ರೀಡರಿಕ್‌ಗೆ ಎಲ್ಲಿಲ್ಲದ ಕಾಳಜಿ. ರಸ್ತೆ ನಿರ್ಮಾಣ, ಉಕ್ಕಿನ ಸೇತುವೆ ನಿರ್ಮಾಣ, ಅಭಿವೃದ್ಧಿಯ ನೆಪದಲ್ಲಿ ಮರಗಳನ್ನು ಕಡಿಯುವುದನ್ನು ತೀವ್ರವಾಗಿ ವಿರೋಧಿಸುವ ಇವರು, ಸ್ವಚ್ಛ ಭಾರತ ಪರಿಕಲ್ಪನೆಯನ್ನು ಬಹುವಾಗಿ ಶ್ಲಾಘಿಸುತ್ತಾರೆ. 'ಮರ ಗಿಡಗಳಿಂದ, ಉದ್ಯಾನವನಗಳಿಂದ ನಗರದ ಸೌಂದರ್ಯ ಹೆಚ್ಚುತ್ತದೆ. ಮರ ಕಡಿಯುವುದರಿಂದ ಯಾವ ಉಪಯೋಗವೂ ಇಲ್ಲ. ಹೆಚ್ಚು ಹೆಚ್ಚು ಗಿಡಗಳನ್ನು ನೆಟ್ಟು ಅವುಗಳನ್ನು ಪೋಷಿಸುವ ನಿಟ್ಟಿನಲ್ಲಿ ನಾವು ಕೆಲಸ ಮಾಡಬೇಕಾಗಿದೆ' ಎಂದು ಪರಿಸರದ ಬಗ್ಗೆ ಸಣ್ಣ ಉಪನ್ಯಾಸವನ್ನೇ ನೀಡುತ್ತಾರೆ ಇವರು.

ಎಲ್ಲ ವಿದೇಶೀಯರಂತೆ ಫ್ರೀಡರಿಕ್ ಅವರಿಗೂ ಇಲ್ಲಿನ ಊಟ ತಿಂಡಿ ಬಹಳ ಹಿಡಿಸಿದೆಯಂತೆ. ದಕ್ಷಿಣ ಭಾರತೀಯ ಶೈಲಿಯ ಅಡುಗೆ ಊಟ ತಿಂಡಿಗಳನ್ನು ಬಹಳ ಇಷ್ಟಪಡುವ ಫ್ರೀಡರಿಕ್, 'ಆರೋಗ್ಯದ ನಿಟ್ಟಿನಲ್ಲಿ ಊಟೋಪಚಾರವೂ ಇದ್ದರೆ ನೆಮ್ಮದಿಯ ಬದುಕು ಸಾಧ್ಯ' ಎನ್ನುತ್ತಾರೆ.

ಸೈಕ್ಲಿಂಗ್ ಮಾಡುವುದು ಇವರ ಪ್ರಿಯವಾದ ಹವ್ಯಾಸ. ವಾರಾಂತ್ಯದಲ್ಲಿ ಕಬ್ಬನ್‌ಪಾರ್ಕ್‌ನಲ್ಲಿ ಸೈಕ್ಲಿಂಗ್ ಮಾಡುತ್ತಾರಂತೆ. 'ವಾಕಿಂಗ್–ಸೈಕ್ಲಿಂಗ್‌ಗೆ ಇಲ್ಲಿನ ಬಹಳಷ್ಟು ಜಾಗಗಳು ಸೂಕ್ತವಾಗಿವೆ. ಮನಸ್ಸಿನ ರಿಲ್ಯಾಕ್ಸ್‌ಗಾಗಿ ಇವೆರಡನ್ನೂ ಬಹಳ ಪ್ರೀತಿಸುತ್ತೇನೆ' ಎನ್ನುವ ಫ್ರೀಡರಿಕ್ ಇಲ್ಲಿನ ಟ್ರಾಫಿಕ್ ಹಾವಳಿ ಬಗ್ಗೆ ಅಪಾರ ಬೇಸರ ವ್ಯಕ್ತಪಡಿಸುತ್ತಾರೆ.

'ಇಲ್ಲಿಗೆ ಬಂದ ಹೊಸತರಲ್ಲಿ ಇಲ್ಲಿ ದೀರ್ಘ ಅವಧಿವರೆಗೆ ಉಳಿಯುವ ಬಗ್ಗೆ ಯೋಚನೆಯೇ ಇರಲಿಲ್ಲ. ಬೇಗನೆ ಮರಳಿ ಜರ್ಮನಿಗೇ ಹೋಗಬೇಕು ಎಂದು ಯೋಜನೆ ಹಾಕಿಕೊಂಡಿದ್ದೆ. ಆದರೆ ಈಗ ಮನಸ್ಥಿತಿ ಬದಲಾಗಿದೆ. ಈಗ ಮರಳಿ ಹೋಗುವ ಬಗ್ಗೆ ಯೋಚನೆಯೇ ಇಲ್ಲ. ಬಹಳಷ್ಟು ವರ್ಷ ಇಲ್ಲೇ ನೆಲೆನಿಲ್ಲುವ ಇರಾದೆ ಇದೆ' ಎಂದು ನಗುತ್ತಾರೆ ಫ್ರೀಡರಿಕ್.

★ ಅವನೀಶ್